**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 2004/2014**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ರಾಜೇಶ** | ಪ್ರಾಸಾಃ 2 |
| ತಂದೆಯ/ಗಂಡನ ಹೆಸರು | | ರಂಗೇಗೌಡ | ಚಾಸಾಃ 2 |
| ವಯಸ್ಸು | | 37 ವರ್ಷ | |
| ಕೆಲಸ | | ಸೇಲ್ಸ್ ಮೆನ್ ಕೆಲಸ | ಸಾ ಪ್ರ ಬೋ |
| ವಾಸ | | ಅತ್ತಳ್ಳಿ ಗ್ರಾಮ, ಟಿ ನರಸೀಪುರ | ದಿಃ 16/08/2022 |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದಃ**

ಈ ಕೇಸಿನಲ್ಲಿ ಅಪಘಾತದಿಂದ ಮೃತಪಟ್ಟ ಎ.ಎನ್ ವೆಂಕಟೇಶ್ ನನಗೆ ಗೊತ್ತು. ದಿನಾಂಕ 11.06.2014 ರಂದು ಅಪಘಾತವಾದ ಸ್ಥಳವಾದ ನಂಜನಗೂಡು-ಟಿ ನರಸೀಪುರ ಮುಖ್ಯ ರಸ್ತೆಯ ಕಲ್ಕುಂದ ಗೇಟ್ ಬಳಿ ಕುಮಾರ್ ರವರ ಜಮೀನಿನ ಬಳಿ ಇರುವ ರಸ್ತೆಯ ಬಳಿ ನನ್ನ ಹಾಗೂ ಚಾಸಾ-1 ಮತ್ತು 3 ರವರ ಸಮಕ್ಷಮ ಬೆಳಗ್ಗೆ ಸುಮಾರು 10.30 ರಿಂದ 11.30 ರವರೆಗೆ ಪಂಚನಾಮೆ ಜರುಗಿಸಿ ಅಪಘಾತಕ್ಕೆ ಈಡಾದ ಮೋಟರ್ ಸೈಕಲ್ ಸಂಖ್ಯೆ ಕೆಎ-05-ಇಬಿ-8697 ಮತ್ತು ಅಪಘಾತ ಪಡಿಸಿದ ಟಾಟಾ ಗೂಡ್ಸ್ ವಾಹನ ಸಂಖ್ಯೆ ಕೆಎ-55-3288 ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ರುಜು ಇರುತ್ತದೆ. ಸದರಿ ದಾಖಲೆಯು ಸ್ಥಳ ಪಂಚನಾಮೆ ಯಾಗಿದ್ದು ಅದನ್ನು ಈಗಾಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಅಪಘಾತಕ್ಕೆ ಈಡಾದ ಮೋಟರ್ ಬೈಕ್ ಮತ್ತು ಟಾಟಾ ಗೂಡ್ಸ್ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಭಾವಚಿತ್ರಗಳನ್ನು ನೋಡಿ ಮೋಟರ್ ಸೈಕಲ್ ಮತ್ತು ಗೂಡ್ಸ್ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಭಾವ ಚಿತ್ರಗಳನ್ನು ಈಗಾಗಲೇ ನಿಪಿ-3 ಮತ್ತು ನಿಪಿ-4 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲು: ಶ್ರೀ ಎ.ಎಂ.ಎಸ್. ಆರೋಪಿ ಪರ ವಕೀಲರಿಂದ:</u>**

ಸ್ಥಳ ಮಹಜರ್ ಗೆ ಬರುವಂತೆ ಪೊಲೀಸರು ನನಗೆ ನೋಟೀಸ್ ನೀಡಿರುವುದಿಲ್ಲ. ಚಾಸಾ-1 ರವರು ನನ್ನನ್ನು ಮಹಜರ್ ಗೆ ಕರೆದುಕೊಂಡು ಹೋಗಿರುತ್ತಾರೆ. ನಿಪಿ-2 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಸಹಿ ಮಾಡುವಂತೆ ಕೋರಿದ್ದರಿಂದ್ದಾಗಿ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೋರಿಕೆಯಂತೆ ನಿಪಿ-2 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಅನುಕೂಲವಾಗಲಿ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**